Sri KONDAJJI BASAPPA.—In fact when the estimates were sent to the Government they had not sent a copy of the resolution of the village panchayet aggreeing to meet their quota of contribution. So, the estimate could not be sanctioned till now.

ಶ್ರೀ ವಿ. ಮಸಿಯಪ್ಪ.—(ಸಿ) ಗೆ ಉತ್ತರವಾಗಿ ಈಗ ಹಣ ಮಂಗಿದು ಹೋಗಿದೆ ಎಂದು ತಿಳಿಸಲಾಗಿದೆ. ಇವುಗಳಿಗೆ 1963-64ನೇ ಸಾಲಿನಲ್ಲಾದರೂ ಹಣ ಒದಗಿಸತಕ್ಕ ಭರವಸೆಯನ್ನು ಕೊಡುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಕಳೆದ ವರ್ಷ ಈ ಬಾಬಿಗೆ 50 ಲಕ್ಷ ರೂ.ಗಳನ್ನೊದಗಿಸಲಾಗಿತ್ತು. ಆಗಲೇ ಆದು ಸಾಲಲಿಲ್ಲ. ಈ ವರ್ಷದಲ್ಲಿ 8.97 ಲಕ್ಷ ರೂ. ಒದಗಿಸಿರುವಾಗ ಬಹಳ ಕಷ್ಟವಿದೆ. ಆದರೆ ನಾವೀಗ ಕೇಂದ್ರದವರಿಂದ ಹಣ ತೆಗೆದುಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಆ ಹಣ ಬಂದರೆ ಈ ಕಾರ್ಯವನ್ನು ತೆಗೆದುಕೊಳ್ಳಲಾಗುತ್ತದೆ.

ಶ್ರೀ ವಿ. ಮಸಿಯಪ್ಪ.—ಮಾನ್ಯ ಮಂತ್ರಿಗಳು ಈ ಗ್ರಾಮಗಳಲ್ಲಿ ಸಂಚರಣೆ ಮಾಡಿರುವುದರಿಂದ ಅವರಿಗೆ ಪೂರ್ಣ ಅನುಭವ ಇದೆ. ಈ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತತ್ವಾಪಿ ಎಳನಡು ಗ್ರಾಮಕ್ಕೆ ಪೂರಾ ತೊಂದರೆ ಇರುವುದು ತಮಗೆ ಗೊತ್ತಿಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಗೊತ್ತಿದೆ.

———

Groups of Banjara Community in the State

*Q.—553. Sri M. N. KRISHNA SINGH (Jagalur).—

Will the Government be pleased to state :—

(*a*) The number of groups (tandas) of Banjara community in the State (Taluk-wise information may be given) ;

(*b*) the population of each group ;

(*c*) whether the educational facilities are provided in each group of this community in accordance with their population ?

A.—Sri K. PRABHAKAR (Deputy Minister for Social Welfare) [on behalf of SMT. YASHODHARA DASAPPA (Minister for Social Welfare)].—

(*a*), (*b*) and (*c*) *Vide* statement placed on the Table of the House. [Placed in the Mysore Legislature's Library *Vide* No. 15, 4th April 1963.]

ಶ್ರೀ ಎಂ. ಎಸ್. ಕೃಷ್ಣಸಿಂಗ್.—ರಾಜ್ಯದಲ್ಲಿ ತಂಡತಂಡವಾಗಿ ಅಲ್ಲಲ್ಲೇ ಇರತಕ್ಕ ಈ ಜನರ ಬಗ್ಗೆ ತಾಲ್ಲೂಕ್ ಲೆವಲ್‌ನಲ್ಲಿ ಯಾವ ಆಧಾರದ ಮೇಲೆ ಈ ಅಂಕಿಗಳನ್ನು ಶೇಖರಣೆ ಮಾಡಿದ್ದೀರಿ ?

ಶ್ರೀ ಕೆ. ಪ್ರಭಾಕರ್.—ಗ್ರಾಮಾಧಿಕಾರಿಗಳ ಹಾಗೂ ತಾಲ್ಲೂಕ್ ಮಟ್ಟದಲ್ಲಿ ಕಥೇರಿಗಳಲ್ಲರ ತಕ್ಕ ರಿಜಿಷ್ಟ್ರಿಗಳಲ್ಲಿರತಕ್ಕ ಅಂಕೀ ಆಧಾರದ ಮೇಲೆ ಇದನ್ನು ಒದಗಿಸಲಾಗಿದೆ.

ಶ್ರೀ ಎಂ. ಎಸ್. ಕೃಷ್ಣಸಿಂಗ್.—ಈ ಅಂಕಿ ಅಂಶಗಳು ಸರಿಯಲ್ಲ ಅಂದರೆ ಅದನ್ನು ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಎಲ್ಲವೂ ಹಾಗೆ ಆಗಿರುತ್ತೆಂದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಯಾವದಾದರೂ ಖಚಿತವಾಗಿ ತಿಳಿಸಿದರೆ ಪುನರ್ಪರಿಶೀಲನೆ ಮಾಡಬಹುದು.

ಶ್ರೀ ಎಂ. ಎಸ್. ಕೃಷ್ಣಸಿಂಗ್.—ಈ ರಿಜಿಷ್ಟ್ರಿಗಳನ್ನು ತಯಾರು ಮಾಡತಕ್ಕವರು ಯಾರು ?

ಶ್ರೀ ಕೆ. ಪ್ರಭಾಕರ್.—ತಾಲ್ಲೂಕು ಮಟ್ಟದಲ್ಲರತಕ್ಕ ರೆವಿನ್ಯೂ ಅಧಿಕಾರಿಗಳು ಈ ರೆಕ್ಕಪತ್ರಗಳನ್ನಿಡುವುದು ಮಾಮೂಲಾಗಿ ಬಂದಿದೆ.

ಶ್ರೀ ಸಿ. ಆರ್. ರಂಗೇಗೌಡ.—ಮಾಗಡಿ ತಾಲ್ಲೂಕಿನಲ್ಲಿ ಒಂದು ಲಂಬಾಣಿ ತಾಂಡಕ್ಕೆ ಮಾತ್ರ ವಿದ್ಯಾಸೌಕರ್ಯ ನೀಡಲಾಗಿದೆ ಎಂದು ಸರ್ಕಾರದವರ ಉತ್ತರದಲ್ಲಿ ತಿಳಿಸಿದೆ. ಆದರೆ ಈ ತಾಲ್ಲೂಕಿನಲ್ಲಿ ಚಿಕ್ಕತೊರೆಪಾಳ್ಯತಾಂಡ, ಸೋವಾನಗರತಾಂಡ್ಯ, ದೊಡ್ಡೇರಿ ತಾಂಡ್ಯ, ನಾಯ್ಕನಪಾಳ್ಯ,

(ಶ್ರೀ ಸಿ. ಆರ್. ರಂಗೇಗೌಡ)

ತಾಂಡ್ಯ; ಸೊಣ್ಣೇನಹಳ್ಳಿ ತಾಂಡ್ಯ, ರಾಮನಾಯ್ಕನ ತಾಂಡ್ಯ, ಶಂಭುದೇವನಹಳ್ಳಿ ತಾಂಡ್ಯ, ತಿಂಗಳಪ್ಪನಹಳ್ಳಿ ತಾಂಡ್ಯ, ಗವಿನಾಗಮಂಗಲ ತಾಂಡ್ಯ, ಕರಲಹಳ್ಳಿ ತಾಂಡ್ಯ ಇತ್ಯಾದಿ ಹತ್ತು ತಾಂಡ್ಯಗಳಿವೆ. ಈ ಹೈಕಿ ಚಿಕ್ಕಕೆರೆ ತಾಂಡ್ಯಕ್ಕೆ ಮಾತ್ರ ಒಂದು ಸ್ಕೂಲನ್ನು ಮಂಜೂರು ಮಾಡಲಾಗಿದೆ. ಬಾಕಿ ತಾಂಡ್ಯಗಳಲ್ಲಿ ವಿದ್ಯಾ ಸೌಲಭ್ಯವಿಲ್ಲ. ಕುಡಿಯುವ ನೀರಿನ ಸೌಲಭ್ಯವಿಲ್ಲ-ವಸತಿ ಸೌಕರ್ಯಗಳಿಲ್ಲ-ಉಳಲು ಜಮೀನಿಲ್ಲ. ಹೀಗೆ ಸರ್ಕಾರ ಅವರನ್ನು ನಿರ್ಲಕ್ಷಿಸಿದೆ. ಈಗಲಾದರೂ ಈ ತಾಂಡಗಳಿಗೆ ವಿದ್ಯಾಸೌಕರ್ಯವನ್ನಾದರೂ ಸರ್ಕಾರದವರು ಕೂಡಲೆ ಒದಗಿಸುವರೇ?

ಶ್ರೀ ಕೆ. ಪ್ರಭಾಕರ್.—ಯಾವಯಾವ ತಾಂಡಗಳಿಗೆ ಬೇರೆ ಯಾವ ರೀತಿಯಲ್ಲೂ ಈ ವಿದ್ಯಾ ಸೌಕರ್ಯದ ಅನುಕೂಲಗಳಿಲ್ಲವೋ ಅಂಥ ತಾಂಡಗಳಿಗೆ ಈಗ ಈ ವಿದ್ಯಾಸೌಕರ್ಯಗಳನ್ನು ಕೊಟ್ಟಿದ್ದಾರೆ. ಬಾಕಿ ತಾಂಡಗಳವರು ಅವರ ತಾಂಡಕ್ಕೆ ಅಕ್ಕಪಕ್ಕದಲ್ಲಿರುವ ಗ್ರಾಮಗಳಿಗೆ ಹೋಗಿ ಈ ಸೌಕರ್ಯವನ್ನು ಉಪಯೋಗಿಸಿಕೊಳ್ಳುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಹಾಗೆ ಪ್ರತ್ಯೇಕವಾಗಿ ಈ ವಿದ್ಯಾಸೌಕರ್ಯಕ್ಕೆ ಒದಗಿಸದಿದ್ದರೆ ಸಾಧ್ಯವಿಲ್ಲ ಎನ್ನತಕ್ಕ ನಿದರ್ಶನಗಳಿದ್ದರೆ ಅವುಗಳನ್ನು ಸರ್ಕಾರದವರ ಗಮನಕ್ಕೆ ತಂದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಸಿ. ಆರ್. ರಂಗೇಗೌಡ.—ಈಗ ತಾವು ಈ ಜಿಲ್ಲೆಯಲ್ಲೆಲ್ಲ ಸಂಚಾರ ಮಾಡಿದ್ದೀರಿ. ಈ ಸೌಕರ್ಯವನ್ನು ಎಲ್ಲೆಲ್ಲಿಗೆ ಕೊಡಬೇಕಾದ್ದು ಅವಶ್ಯಕ ಎಂಬುದು ತಮಗೆ ಮನವರಿಕೆಯಾಗಿದೆ. ಆದ್ದರಿಂದ ತಾವು ಸಂಚಾರ ಮಾಡಿಕೊಂಡು ಬಂದಿರತಕ್ಕ ಪ್ರದೇಶಗಳಿಗೆ ಈ ಸೌಕರ್ಯವನ್ನು ಒದಗಿಸಿಕೊಡಲು ಪ್ರಯತ್ನ ಮಾಡುತ್ತೀರಾ?

ಶ್ರೀ ಕೆ. ಪ್ರಭಾಕರ್.—ಮಂತ್ರಿಗಳು ವೈಯಕ್ತಿಕವಾಗಿ ಸಂಚಾರ ಮಾಡಿರತಕ್ಕ ಸ್ಥಳಗಳನ್ನೆಲ್ಲಾ ಸರ್ಕಾರದ ಮಟ್ಟದಲ್ಲಿ ಸಂಚಾರ ಮಾಡಿದ್ದಾರೆಂಬುದನ್ನು ನಾನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಈ ಸೌಲಭ್ಯಗಳನ್ನು ಒದಗಿಸತಕ್ಕ ಬಗ್ಗೆ ಸರ್ಕಾರದಲ್ಲಿ ಒಂದು ನಿರ್ದಿಷ್ಟವಾದ ನೀತಿ ನೇಮಗಳಿವೆ. ಅದರ ಪ್ರಕಾರ ನಾವು ಕೊಡುತ್ತೇವೆ. ತಿರುಗಾಡಿದ ಸ್ಥಳಗಳಿಗೆಲ್ಲ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಜೆ. ಎಲ್. ಕಬಾಡಿ.—ಈಗ ಬೊಂಬಾಯಿ ಕರ್ಣಾಟಕ ಪ್ರಾಂತ್ಯದಲ್ಲಿರತಕ್ಕ ಬಂಜಾರ ತಾಂಡಕ್ಕೆ ಒಂದು ತರಹ, ಹಳೇ ಮೈಸೂರಿನಲ್ಲಿರತಕ್ಕ ತಾಂಡಕ್ಕೇ ಒಂದು ತರಹ, ಹೈದ್ರಾಬಾದ್ ಕರ್ಣಾಟಕ ಪ್ರದೇಶದಲ್ಲಿರತಕ್ಕ ತಾಂಡಕ್ಕೆ ಒಂದು ತರಹ ಹೀಗೆ ಬೇರೆಬೇರೆ ಪ್ರದೇಶಕ್ಕೆ ಒಂದೊಂದು ಪಟ್ಟಿ ಮಾಡಿದ್ದಾರೆ. ಹೀಗೆ ಈ ಪ್ರತಿಯೊಂದು ಪಟ್ಟಿಯಲ್ಲಿರತಕ್ಕವರಿಗೆಲ್ಲ ಈ ಹಣವನ್ನು ಮಾಸಲಾಗಿಡಲಾಗಿದೆಯೇ?

ಶ್ರೀ ಕೆ. ಪ್ರಭಾಕರ್.—ಒಂದೊಂದು ಪ್ರದೇಶದ ಪದ್ಧತಿ ಒಂದೊಂದು ತರಹ ಇದ್ದುದರಿಂದ ಆ ರೀತಿ ಮಾಡಲಾಗಿದೆ. ಆದರೂ ದಾಮಾಷಾ ಪ್ರಕಾರ ಅವರಿಗೆಲ್ಲ ಹಣವನ್ನು ಒದಗಿಸಲಾಗುತ್ತಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—7 ದಿವಸಗಳಲ್ಲಿ 14 ಜಿಲ್ಲೆಗಳಲ್ಲಿ ಪ್ರವಾಸಮಾಡಲಾಗಿದೆ. ಈ ಅವಧಿಯಲ್ಲಿ ಎಷ್ಟು ತಾಂಡಗಳನ್ನು ನೋಡಲಿಕ್ಕೆ ಸಾಧ್ಯವಾಯಿತು?

ಶ್ರೀ ಕೆ. ಪ್ರಭಾಕರ್.—ಇದರಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜೆ. ಎಲ್. ಕಬಾಡಿ.—ಕೆಲವು ಷೆಡ್ಯೂಲ್ಡ್ ಟ್ರೈಬ್ಸ್‌ಗಳಿಗೂ, ಡೀ-ನೋಟಿಫೈಡ್ ಟ್ರೈಬ್ಸ್‌ಗಳಿಗೂ ಮತ್ತು ಸೆಮಿನೋಮ್ಯಾಡಿಕ್ ರೇಸುಗಳಿಗೂ ಇವರ ಅಭಿವೃದ್ಧಿಗೆ ಸೌಕರ್ಯಶಿಕ್ಷಣ ಸೌಲಭ್ಯಗಳನ್ನೊದಗಿದಲ್ಲಿ ಈ ಬಾಬಿಗೆ ರಾಜ್ಯ ಸರ್ಕಾರ ಸಾಕಷ್ಟು ಹಣ ಒದಗಿಸಿಲ್ಲ ಎಂಬುದು ರಾಜ್ಯ ಸರ್ಕಾರದವರಿಗೆ ಮನವರಿಕೆಯಾಗಿದೆಯೇ?

ಶ್ರೀ ಕೆ. ಪ್ರಭಾಕರ್.—ಆಗಿದೆ.

ಶ್ರೀ ಜೆ. ಎಲ್. ಕಬಾಡಿ.—ಅದರ ಬಗ್ಗೆ ತಕ್ಷಣ ಏನು ಕಾರ್ಯಕ್ರಮ ಕೈಗೊಂಡಿದ್ದೀರಿ?

ಶ್ರೀ ಕೆ. ಪ್ರಭಾಕರ್.—ಏನು ಕ್ರಮವಿದೆಯೋ ಅದನ್ನನುಸರಿಸಿ ಎಷ್ಟು ಸೌಲಭ್ಯಗಳನ್ನು ಒದಗಿಸಿಕೊಡಬಹುದು ಎನ್ನುವ ವಿಚಾರ ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಶ್ರೀ ಜೆ. ಎಲ್. ಕಬಾಡಿ.—Hill tribes, De-notified tribes, Scheduled tribes, Semi-nomadic tribes ನಲ್ಲಿ ಬರುವಂಥ ಬಣಜಾರರಿಗೆ ಎಷ್ಟೆಷ್ಟು ಜನಗಳಿಗೆ ಶಿಕ್ಷಣ ಸೌಕರ್ಯಗಳನ್ನೊದಗಿಸಿದ್ದೀರಿ?

ಶ್ರೀ ಕೆ. ಪ್ರಭಾಕರ್.—ಹೆಸರು ಬೇರೆ ಇದ್ದರೂ ಕೋಮು ಒಂದೇ ಎಂದು ಮಾನ್ಯ ಸದಸ್ಯರಿಗೆ ಗೊತ್ತು. ಅವರಿಗೆ ದಾಮಾಷಾ ಪ್ರಕಾರ ಕೊಡತಕ್ಕ ಸಹಾಯವನ್ನೂ ಒದಗಿಸಿಕೊಟ್ಟಿದ್ದೇವೆ.

ಶ್ರೀ ಟಿ. ಮಾದಯ್ಯಗೌಡ.—ಮಾಗಡಿ ತಾಲ್ಲೂಕಿನಲ್ಲಿ ಏಳು ದೊಡ್ಡ ದೊಡ್ಡ ತಾಂಡಗಳಿವೆ. ಇವುಗಳೆಲ್ಲವನ್ನೂ ತಾವು ವೈಯಕ್ತಿಕವಾಗಿ ನೋಡಿದ್ದಿರಿ. ಇದರಲ್ಲಿ ಒಂದು ತಾಂಡದ ಏನಾ ಉಳಿದ

ತಾಂಡಗಳಲ್ಲಿ ಸ್ಕೂಲು ಇಲ್ಲ ಎನ್ನುವುದು ಗೊತ್ತಿದ್ದರೂ ಕೂಡ ಅಧಿಕಾರ ದೃಷ್ಟಿಯಿಂದ ವಿವೇಚನೆ ಮಾಡುವುದಿಲ್ಲವೆಂದು ಅಪ್ಪಣೆ ಕೊಟ್ಟಿದ್ದೀರಿ. ಇದಕ್ಕೆ ಅರ್ಥವೇನು ?

ಶ್ರೀ ಕೆ. ಪ್ರಭಾಕರ್.—ವೈಯಕ್ತಿಕವಾಗಿ ಎಲ್ಲ ನೋಡಿದ್ದೇನೆ. ವೈಯಕ್ತಿಕವಾಗಿ ಅಲ್ಲಿ ಸ್ಕೂಲು ಬೇಕು ಎಂದೂ ಗೊತ್ತಿದೆ. ವೈಯಕ್ತಿಕವಾಗಿ ನೋಡಿರುವ ವಿಚಾರ ಸರ್ಕಾರದ ಮಟ್ಟದಲ್ಲಿ ಕೆಲಸ ಮಾಡುವುದು ಎರಡೂ ಬೇರೆ ಬೇರೆ ಎಂದು ನಾನು ಹೇಳಿದೆ.

ಶ್ರೀ ಜೆ. ಎಲ್. ಕಬಾಡಿ.—ಬಣಜಾರ ಕೋಮಿನವರಿಗೆ 31 ನೆಯ ಮಾರ್ಚಿ ಒಳಗೆ ಸ್ಕಾಲರ್ ಷಿಪ್ ಗಳು ಮಂಜೂರಾಗದೆ ಇರುವುದರಿಂದ ಅವರ ಶಿಕ್ಷಣಕ್ಕೆ ಅನ್ಯಾಯಮಾಡಿದಂತಾಗುತ್ತದೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪ್ರಭಾಕರ್.—ಅನ್ಯಾಯ ಮಾಡಬೇಕು ಎನ್ನುವುದು ಸರ್ಕಾರದ ಉದ್ದೇಶವಲ್ಲ. ಯಾರಿಗೂ ಅನ್ಯಾಯವಾಗಬಾರದೆನ್ನುವುದೇ ಸರ್ಕಾರದ ಖಚಿತವಾದ ಧ್ಯೇಯ.

Sri N. O. SAMAJI.—(*Spoke in Marathi*)

Sri K. PRABHAKAR.—It means too many details Sir. The numbers are not available.

Sri N. O. SAMAJI.—(*Spoke in Marathi*)

ಶ್ರೀ ಕೆ. ಪ್ರಭಾಕರ್.—ಹಣವನ್ನು ವಿಲೇವಾರಿ ಮಾಡುವಾಗ ಸ್ಥೂಲವಾಗಿ ಪ್ರಜಾನಂಚ್ಗೆ, ಅವರ ಹಿಂದುಳಿದಿರುವಿಕೆ ಇವೆರಡನ್ನೂ ಗಮನದಲ್ಲಿಟ್ಟು ಹಂಚಲಾಗುತ್ತದೆ.

ಶ್ರೀ ಜೆ. ಎಲ್. ಕಬಾಡಿ.—ಕಾಲೇಜಿನಲ್ಲಿ ವ್ಯಾಸಂಗ ಮಾಡತಕ್ಕ ಬಣಜಾರ ಕೋಮಿನ ಹುಡುಗರಿಗೆ ಸ್ಕಾಲರ್ ಷಿಪ್ ಕೊಡಬೇಕೆಂದು ವಿನಂತಿಮಾಡಿಕೊಂಡ ಮೇರೆ ಆ ಕೋಮಿನವರು de-notified tribes, hill tribes ಹೀಗೆ ಯಾವುದಾದರೂ ಗುಂಪಿಗೆ ಸೇರಿದ್ದಾರೆಯೇ ಹೇಗೆ ಎಂದು Director of Collegiate Education ಅವರು ಕೇಳಿದಾಗ ಸಾಕಷ್ಟು ಮಾಹಿತಿ ಕೊಡದೇ ಇರುವುದರಿಂದ ಸ್ಕಾಲರ್ ಷಿಪ್ ಗಳು ಮಂಜೂರಾಗಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪ್ರಭಾಕರ್.—ಅಷ್ಟು ವಿವರವಾಗಿ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಜೆ. ಎಲ್. ಕಬಾಡಿ.—ಇದರ ಬಗ್ಗೆ ಆ ಹುಡುಗರು ಮಾರ್ಚಿ 22 ನೆಯ ತಾರೀಖಿನ ದಿವಸ ಒಂದು ಅರ್ಜಿಯನ್ನು ಕೊಟ್ಟಿದ್ದು ಸರ್ಕಾರದವರು ಅದನ್ನು ಯಾವ ರೀತಿ ಗಣನೆಗೆ ತೆಗೆದುಕೊಂಡಿದ್ದಾರೆ ?

ಶ್ರೀ ಕೆ. ಪ್ರಭಾಕರ್.—ಕಾನೂನು ಅನುಸರಿಸಿ ಏನು ಕ್ರಮ ತೆಗೆದುಕೊಳ್ಳಬೇಕೋ ಆ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ತುಮಕೂರು ತಾಲ್ಲೂಕಿನ ಲಂಬಾಣಿ ತಾಂಡಕ್ಕೆ ಯಾವಾಗಲಾದರೂ ಭೇಟಿ ಕೊಟ್ಟಿದ್ದೀರಾ ? ಅಲ್ಲಿಗೆ ಏನು ಸೌಲಭ್ಯ ಬೇಕಾಗಿದೆ ?

ಶ್ರೀ ಕೆ. ಪ್ರಭಾಕರ್.—ಮಾನ್ಯ ಸದಸ್ಯರು ಕೇಳುವ ತಾಂಡವನ್ನು ನಾನು ನೋಡಿಲ್ಲ ಸ್ವಾಮಿ.

ಶ್ರೀ ಜೆ. ಎಲ್. ಕಬಾಡಿ.—ಕಾನೂನಿಗೆ ಅನುಸರಿಸಿ ಕೊಡಲಾಗುತ್ತದೆಂದು ಹೇಳಿದರು. ಕಾನೂನಿಗೆ ಅನುಸರಿಸಿ ಕೊಟ್ಟಿಲ್ಲವೆನ್ನುವುದನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಯಾವ ಕಾನೂನನ್ನು ಅನುಸರಿಸಿ ಅವರಿಗೆ ಕೊಟ್ಟಿದ್ದೀರಿ ?

Mr SPEAKER.—If you have got any individual instance, where rules are not observed, put it in the form of a question.

ಶ್ರೀ ಜೆ. ಎಲ್. ಕಬಾಡಿ.—ಬಿಜಾಪುರದ ವಿಜಯ ಕಾಲೇಜಿನಲ್ಲಿ ಓದತಕ್ಕ ಬಣಜಾರ ಕೋಮಿಗೆ ಸೇರತಕ್ಕ ವಿದ್ಯಾರ್ಥಿಗಳು ತಮ್ಮ ಕಡೆ ಅರ್ಜಿ ಮಾಡಿಕೊಂಡಾಗ ನನಗೆ ಯಾವುದೂ ಗೊತ್ತಿಲ್ಲವೆಂದು ಮಾನ್ಯ ಮಂತ್ರಿಗಳು ಉತ್ತರಿಸಿದ್ದು, ಯಾವ ತರಹ ಹಣವನ್ನು award of Scholarships ಗಾಗಿ ಅವರಿಗೆ ಓದಗಿಸಿಲ್ಲವೆಂದು ಕೇಳಿದಾಗ ಹಣಕಾಸಿನ ಮಂತ್ರಿಗಳು ಯಾವುದೋ ಬಡ್ಜೆಟ್ ಹೆಡ್ ನಿಂದ ಕೊಟ್ಟದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri B. D. JATTI.—(Minister for Finance).—Sir, the difference is whether the education department is to give the scholarship or the social welfare department ; that was the point at issue. Now, it will be settled Sir.

Sri L. B. BIRJE —(*Spoke in Marathi*)

Sri B. D. JATTI.—Sir, that question is not under consideration ; it is not necessary for the Hon'ble Member to take so much of trouble.